ಸಾಕ್ಷಿಯನ್ನು ದಿಃ 05-07-2024 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್ ಎಫ್ ಡಿ ವಕೀಲರಿಂದಃ**

ನಾನು ಇಂದು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

ದಾವಾ ಆಸ್ತಿಗಳಿಗೆ ಸಂಬಂಧಿಸಿದ ಮೂರು ಪಹಣಿಗಳನ್ನು ನಿಪಿಃ 1 ರಿಂದ 3 ಎಂದು, ಮನೆಗಳ ದೃಢೀಕರಣ ಪತ್ರಗಳನ್ನು ನಿಪಿಃ4 ಮತ್ತು ನಿಪಿಃ 5 ಎಂದು, ಆರ್.ಓ.ಆರ್ ನಿಪಿಃ 6 ಎಂದು, ಎರಡು ಮ್ಯುಟೇಶನ್ ಗಳನ್ನು ನಿಪಿಃ 7 ಮತ್ತು ನಿಪಿಃ8 ಎಂದು, ನಮ್ಮ ತಂಗಿ ಶಾಂತವ್ವ ಇವರ ಮರಣ ದಾಖಲೆ ನಿಪಿಃ 9 ಎಂದು, ಮೃತ್ಯುಪತ್ರದ ದೃಢೀಕೃತ ನಕಲು ನಿಪಿಃ 10 ಎಂದು, ಖರೀದಿ ಪತ್ರದ ದೃಢೀಕೃತ ನಕಲು ನಿಪಿಃ11 ಎಂದು, ಮ್ಯುಟೇಶನ್ ಪ್ರತಿ ನಿಪಿಃ 12 ಎಂದು, ತಹಶೀಲ್ದಾರವರಿಗೆ ಕೊಟ್ಟ ಅರ್ಜಿ ಪ್ರತಿ ನಿಪಿಃ 13 ಎಂದು, ನಮ್ಮ ತಂದೆ ಗುರುಯ್ಯ ಮಾಡಿದ ಮೂಲ ಮೃತ್ಯು ಪತ್ರ ನಿಪಿಃ14 ಎಂದು, ಅದರಲ್ಲಿ ನಮ್ಮ ತಂದೆಯ ಸಹಿಗಳನ್ನು ನಿಪಿಃ14(ಎ) ದಿಂದ 14(ಜಿ) ಎಂದು, ನಮ್ಮ ತಂದೆಯ ಮರಣ ದಾಖಲೆ ನಿಪಿಃ15 ಎಂದು ಗುರುತಿಸಿದೆ. ದಾವಾ ಆಸ್ತಿಗಳ ಇತ್ತಿಚ್ಚಿನ ಪಹಣಿಗಳನ್ನು ನಿಪಿಃ 16 ರಿಂದ 18 ಎಂದು, ಎರಡು ಮ್ಯುಟೇಶನ್ ಪ್ರತಿಗಳನ್ನು ನಿಪಿಃ 19 ಮತ್ತು 20 ಎಂದು, ಮನೆಗಳ ದೃಢೀಕರಣ ಪತ್ರಗಳನ್ನು ನಿಪಿಃ21 ಮತ್ತು 22 ಎಂದು ಗುರುತಿಸಿದೆ.

ಕಾರಣ ದಾವೆಯಲ್ಲಿ ಕೇಳಿದಂತೆ ಪರಿಹಾರ ನೀಡಲು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ (ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.